ಮೂಲ ದಾವಾ ಸಂಖ್ಯೆ. 179/2016 ಡಿ ಡಬ್ಲ್ಯೂ 1

(ದಿನಾಂಕ 10-01-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ವಾದಿ ಪರ ಶ್ರೀಮತಿ ಎಸ್ ಹೆಚ್ ವಿ ವಕೀಲರಿಂದಃ-

ಸದರಿ ಮೂಲ ಖರೀದಿ ಪತ್ರಗಳನ್ನು ಹಾಜರುಪಡಿಸಲು ನನಗೆ ಯಾವುದೇ ಅಧಿಕಾರ ಇಲ್ಲವೆಂದರೆ ಸರಿಯಲ್ಲ. ನಿಡಿ-6, 9, 3, ದಿಃ20-04-1972, ದಿಃ12-05-1971, ದಿಃ05-12-1992, ದಿನಾಂಕಃ08-11-1989, ದಿಃ07-04-2011 ಮತ್ತು 07-04-2011 ರ ಕ್ರಯಪತ್ರಗಳನ್ನು ಹಾಜರುಪಡಿಸಲು ನಿಮಗೆ ಯಾವುದೇ ಅಧಿಕಾರ ಇರುವುದಿಲ್ಲವೆಂದರೆ ಸರಿಯಲ್ಲ. ನಿಮ್ಮ ಅಜ್ಜಿ ಕಡ್ಲೆಮ್ಮ ಇವರ ಹೆಸರಿಗೆ ದಾವಾಸ್ತಿಯನ್ನು ದಾಖಲುಪಡಿಸಿಕೊಳ್ಳಲು ಯಾವ ದಾಖಲಾತಿಗಳೊಂದಿಗೆ ಪಂಚಾಯ್ತಿಗೆ ಅರ್ಜಿ ನೀಡಿದ್ದರು ಎಂದರೆ ಸಾಕ್ಷಿಯು ಖರೀದಿಪತ್ರದ ಆಧಾರದ ಮೇಲೆ ಅರ್ಜಿ ನೀಡಿದ್ದರು ಎನ್ನುತ್ತಾರೆ. ನಿಡಿ-65 ರಲ್ಲಿ ಉಲ್ಲೇಖಿಸಿರುವಂತಹ ಹಕ್ಕುಬಿಡುಗಡೆ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಮ್ಮ ಅಜ್ಜಿಯ ಹೆಸರಿಗೆ ದಾವಾಸ್ತಿಗೆ ಸಂಬಂಧಿಸಿದಂತೆ ಖಾತಾ ಬದಲಾವಣೆ ಕುರಿತು ಗ್ರಾಮ ಪಂಚಾಯ್ತಿಯಲ್ಲಿ ಆದಂತಹ ಠರಾವನ್ನು ಹಾಜರುಪಡಿಸಿದ್ದೇನೆ. ನಿಡಿ-68 ರಿಂದ 79 ರವರೆಗಿನ ಆಸ್ತಿಗಳ ಕುರಿತು ಆದ ಖಾತಾ ಬದಲಾವಣೆಯ ಠರಾವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಗ್ರಾಮ ಪಂಚಾಯ್ತಿಯವರು ದಾವಾಸ್ತಿಗೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ನಮ್ಮ ಹೆಸರಿಗೆ ನಮೂದಿಸಿರುವುದಿಲ್ಲವೆಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಹಾಜರುಪಡಿಸಿರುವಂತಹ ತೆರಿಗೆ ಪಾವತಿ ರಶೀದಿಗಳನ್ನು ಗ್ರಾಮ ಪಂಚಾಯ್ತಿಯವರು ನೀಡಿರುತ್ತಾರೆ. ಕೋಗಳಿ ರುದ್ರಮ್ಮ, ವಂಟಗೋಡಿ ವೀರಣ್ಣ, ಗುರುಸಿದ್ದಯ್ಯ, ಗುರುಸಿದ್ದಪ್ಪ ಮತ್ತು ಇತರರ ಹೆಸರಿನಲ್ಲಿರುವ ಕರ ಪಾವತಿ ರಶೀದಿಗಳನ್ನು ನಿಮಗೆ ಯಾರು ನೀಡಿದ್ದರು ಎಂದರೆ ಸಾಕ್ಷಿಯು ಸದರಿ ಸಂಬಂಧಿಸಿದ ಪಾರ್ಟಿದಾರರು ನನಗೆ ರಶೀದಿಗಳನ್ನು ನೀಡಿರುತ್ತಾರೆ ಎನ್ನುತ್ತಾರೆ. ಸದರಿ ರಶೀದಿಗಳನ್ನು ಹಾಜರುಪಡಿಸಲು ನನಗೆ ಯಾವುದೇ ಅಧಿಕಾರ ಇರುವುದಿಲ್ಲವೆಂದರೆ ಸರಿಯಲ್ಲ. ನಿಮಗೆ ಸಂಬಂಧಪಟ್ಟಿರುತ್ತವಂತಾ ಹೇಳಿ ಹಾಜರುಪಡಿಸಿರುವ ನಿಡಿ-84, 85, 86, 90 ಮತ್ತು 91 ದಾಖಲೆಗಳಲ್ಲಿ ಖಾತಾ ಬದಲಾವಣೆ ನಂಬರ್ ಮತ್ತು ಖಾಲಿ ಜಾಗದ ನಂಬರ್ ಅಂತಾ ನಮೂದಿಸಿ ದಾಖಲೆಗಳನ್ನು ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ಸಂಪೂರ್ಣ ದಾಖಲೆಗಳ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುತ್ತದೆ. ಸದರಿ ನೊಂದಾಯಿತ ಖರೀದಿ ಪತ್ರಗಳನ್ನು ಬರೆಸುವ ಕಾಲಕ್ಕೆ ನಾನು ಹಾಜರಿರಲಿಲ್ಲ. ನಾನು ನಮಗೆ ಅನುಕೂಲವಾಗಲು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆಂದರೆ ಸರಿಯಲ್ಲ. ಮನೆ ಕಟ್ಟುವ ಸಲುವಾಗಿ ಲೈಸನ್ಸ ಕೇಳಿ ಪಂಚಾಯ್ತಿಗೆ ಅರ್ಜಿ ನೀಡಿದ್ದೇನೆ ಅದರ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಲೈಸನ್ಸ ಕೊಡುವ ಸಮಯದಲ್ಲಿಯೂ ಸಹಾ ಪಂಚಾಯ್ತಿಯಲ್ಲಿ ಠರಾವು ಮಾಡಿ ಲೈಸನ್ಸನ್ನು ಕೊಡುತ್ತಾರೆಂದರೆ ಸರಿ. ಸದರಿ ಲೈಸನ್ಸನಲ್ಲಿ ಅರ್ಜಿ ದಿನಾಂಕ, ವರ್ಷ ತಿಂಗಳು ಲೈಸನ್ಸನ ಅವಧಿ ಆಸ್ತಿ ನಂಬರ್ ಮತ್ತು ಇತರೆ ಷರತ್ತುಗಳನ್ನು ನಮೂದಿಸಿ ಲೈಸನ್ಸ ನೀಡುತ್ತಾರೆಂದರೆ ಸರಿ. ಆ ರೀತಿ ನೀಡಿರುವಂತಹ ಲೈಸನ್ಸನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಜಯಪ್ಪರವರ ಜಾಗದಲ್ಲಿ ಬೇರೆಯವರು ಮನೆ ಕಟ್ಟಿರುವ ಬಗ್ಗೆ ಲೈಸನ್ಸನ್ನು ಹಾಜರುಪಡಿಸಿದ್ದೇನೆ. ನಾನು ವಾದಿಯ ಜಾಗದಲ್ಲಿ ವಾದಿಯ ಪರವಾನಿಗೆ ಇಲ್ಲದೇ ಅಕ್ರಮವಾಗಿ ಮನೆಯನ್ನು ಕಟ್ಟಿಕೊಂಡಿರುತ್ತೇನೆಂದರೆ ಸರಿಯಲ್ಲ. ನಾನು ಕಟ್ಟಿಕೊಂಡಿರುವ ಮನೆ ಅದು ಸರ್ವೆ ನಂಬರಿನಲ್ಲಿದೆ ಅದು ಎನ್ ಎ

ಆಗಿಲ್ಲವೆಂದರೆ ಸರಿ. 1.03 ಎಕರೆ ಜಮೀನು ದಾವಾಸ್ತಿ ಇವತ್ತಿಗೂ ವಾದಿಯ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ವಾದಿಯ ಜಮೀನಿನಲ್ಲಿ ಮನೆಯನ್ನು ಅಕ್ರಮವಾಗಿ ಕಟಿಟಕೊಂಡು ಕಂದಾಯ ಇಲಾಖಲೆಯವರ ಜೊತೆ ಶಾಮೀಲಾಗಿ ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆಂದರೆ ಸರಿಯಲ್ಲ. ದಾಖಲೆಗಳ ಕುರಿತು ನಾವು ಎ ಸಿ ಯವರಿಗೆ ಮೇಲ್ಮನವಿ ಸಲ್ಲಿಸಿದ್ದೆವು ಎಂದರೆ ಸರಿ. ಎ ಸಿ ಯವರು ತಹಶೀಲ್ದಾರ್ ಮಾಡಿದ ಆದೇಶವನ್ನು ರದ್ದುಪಡಿಸಿ ವಾದಿಯ ಹೆಸರಿಗೆ ದಾವಾ ಜಮೀನಿನ ಪಹಣಿ ಮಾಡಲು ಆದೇಶಿಸಿರುತ್ತಾರೆಂದರೆ ಸರಿ. ದಾವಾಸ್ತಿಯು ಇವತ್ತಿನವರೆಗೂ ವಾದಿಯ ಹೆಸರಿನಲ್ಲಿದೆ ಸದರಿ ಆಸ್ತಿಯಲ್ಲಿ ಮನೆ ಕಟ್ಟಿಕೊಳ್ಳಲು ಯಾವುದೇ ಅಧಿಕಾರವಿರುವುದಿಲ್ಲವೆಂದರೆ ಸರಿಯಲ್ಲ. ನನಗೆ ಅನುಕೂಲವಾಗುವಂತೆ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ನ್ಯಾಯಾಲಯದಲ್ಲಿ ಸುಳ್ಳು ಪ್ರತಿವಾದಿ ಪತ್ರವನ್ನು ಸಲ್ಲಿಸಿ ಅದಕ್ಕನುಗುಣವಾಗಿ ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾಸ್ತಿಗೆ ಸಂಬಂಧವಲ್ಲದ ಖರೀದಿ ಪತ್ರಗಳ ಬಗ್ಗೆ ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಬರೆಸಿದ್ದು, ಆ ರೀತಿ ಬರೆಸಲು ನನಗೆ ಯಾವುದೇ ಅಧಿಕಾರವಿಲ್ಲವೆಂದರೆ ಸರಿಯಲ್ಲ. ಸದರಿ ದಾಖಲೆಗಳು ದಾವಾಸ್ತಿಗೆ ಸಂಬಂಧವಲ್ಲದ ದಾಖಲೆಗಳಾಗಿರುವುದರಿಂದ ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಮತ್ತು ಆ ದಾಖಲೆಗಳ ಬಗ್ಗೆ ಸಾಕ್ಷಿ ನುಡಿಯಲು ಯಾವುದೇ ಅಧಿಕಾರವಿಲ್ಲವೆಂದರೆ ಸರಿಯಲ್ಲ. ದಾವಾಸ್ತಿಯಲ್ಲಿ ವಾದಿಯ ಅನುಮತಿ ಇಲ್ಲದೆ ಅಕ್ರಮವಾಗಿ ಮನೆ ಕಟ್ಟಿಕೊಂಡು ವಾದಿಯ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ